ಅಧ್ಯಕ್ಷರು,
ಅಪೀಲುಗಳ ಸ್ಥಾಯಿ ಸಮಿತಿ.

**ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ**

**ಅಪೀಲು ಸ್ಥಾಯಿ ಸಮಿತಿಯ ದಿನಾಂಕ:31-12-2010ರಂದು ನಡೆದ ಸಭೆಯ ನಡವಳಿಗಳು**

| ಕ್ರಮ ಸಂಖ್ಯೆ | ಸದಸ್ಯರು ಹೆಸರು ಶ್ರೀಯುತರುಗಳಾದ | ಪದನಾಮ | ಹಾಜರಿದ್ದ ಅಧಿಕಾರಿಗಳು |
|---|---|---|---|
| 01 | ಡಿ.ವೆಂಕಟೇಶ್ ಮೂರ್ತಿ | ಅಧ್ಯಕ್ಷರು | ಕೌನ್ಸಿಲ್ ಕಾರ್ಯದರ್ಶಿ |
| 02 | ಎಂ.ಕೃಷ್ಣಪ್ಪ | ಸದಸ್ಯರು | ಉಪ ಕಾನೂನು ಅಧಿಕಾರಿ |
| 03 | ಎಂ.ಮುನಿರಾಜು | ಸದಸ್ಯರು | ಸಹಾಯಕ ಕಂದಾಯ ಅಧಿಕಾರಿ (ಕೆಂಪೇಗೌಡನಗರ) |
| 04 | ಶ್ರೀಧರ ರೆಡ್ಡಿ ಎನ್.ಆರ್. | ಸದಸ್ಯರು | ಆರೋಗ್ಯ ವೈದ್ಯಾಧಿಕಾರಿ (ಜಯನಗರ)/(ಬಿಟಿಎಂ)ವಲಯ |
| 05 | ಡಾ॥ಎಸ್.ರಾಜು | ಸದಸ್ಯರು | |
| 06 | ರಮೇಶ್ ರಾಜು ಕೆ. | ಸದಸ್ಯರು | |
| 07 | ಮುನಿರತ್ನಮ್ಮ | ಸದಸ್ಯರು | |
| 08 | ಶಾಹೀನ್ ತಾಜ್ | ಸದಸ್ಯರು | |
| 09 | ಎಸ್.ಕೆ.ಪುಷ್ಪ | ಸದಸ್ಯರು | |
| 10 | ಮುನಿಸಂಜೀವಯ್ಯ | ಸದಸ್ಯರು | |
| 11 | ಎಸ್.ಕ್ರಿಯಾ ಶೈಲಜಾ | ಸದಸ್ಯರು | |

(ಹಿಂದಿನ ಸಭೆಯ ನಡವಳಿಕೆಗಳನ್ನು ಓದಿ ದಾಖಲು ಮಾಡಿಕೊಳ್ಳಲಾಯಿತು)

01.ವಿಷಯ:ಸಂಖ್ಯೆ:ಅಸ್ಥಾಸ/(ತೆ)/02/2010-11

ಕೆಂಪೇಗೌಡ ನಗರ ಉಪ ವಿಭಾಗದ ವಾರ್ಡ್ ಸಂಖ್ಯೆ:118(ಹಳೆ ವಾಡ್-48), ಸುಧಾಮನಗರ, 2ನೇ ಅಡ್ಡರಸ್ತೆ, ಲಾಲ್ ಬಾಗ್ ರಸ್ತೆಯಲ್ಲಿರುವ ಸ್ವತ್ತಿನ ಸಂಖ್ಯೆ:3ರ ಖಾತೆದಾರರಾದ ಶ್ರೀ.ಲೋಕೇಶ್‌ರವರು, ವಾರ್ಷಿಕ ಮೌಲ್ಯ ರೂ.3,22,560/-(ವಸತಿಯೇತರ)ಗಳಿಗೆ ದಿನಾಂಕ:01-04-2006ರಿಂದ ಜಾರಿಗೆ ಬರುವಂತೆ ಪರಿಷ್ಕರಿಸಿರುವ ತೆರಿಗೆ ಬಗ್ಗೆ ಸಲ್ಲಿಸಿದ್ದ ಮೇಲ್ಮನವಿಯನ್ನು ಪ್ರಥಮ ಅಪೀಲು ಅಧಿಕಾರಿಗಳು ಸ್ಥಿರೀಕರಿಸಿದ್ದು, ಸದರಿ ಸ್ಥಿರೀಕರಣದ ಆದೇಶದ ದಿನಾಂಕ:11-08-2009ರ ವಿರುದ್ಧ ಸಲ್ಲಿಸಿರುವ ಮೇಲ್ಮನವಿಯ ತೀರ್ಮಾನಕ್ಕಾಗಿ ಮಂಡಿಸಿರುವ ಅಪರ ಆಯುಕ್ತರ(ದಕ್ಷಿಣ) ರವರ ಟಿಪ್ಪಣಿ.

ಪ್ರಸ್ತಾವನೆ:- ಅರ್ಜಿದಾರರು ಹಾಜರಿದ್ದು ಸ್ವತ್ತಿನಲ್ಲಿ ಸ್ವಲ್ಪ ಭಾಗವನ್ನು ಸ್ವಂತಕ್ಕೂ ಸ್ವಲ್ಪ ಭಾಗವನ್ನು ಬಾಡಿಗೆಗೂ ನೀಡಿರುವುದಾಗಿ, ನಿಗಧಿ ಪಡಿಸಿರುವ ಕಂದಾಯವು ಕ್ರಮ ಬದ್ಧವಾಗಿಲ್ಲವೆಂದು ತಿಳಿಸಿರುತ್ತಾರೆ. ಅರ್ಜಿದಾರರು ಹಾಗೂ ದಿನಾಂಕ:08-09-2009ರಂದು ನೀಡಿರುವ ಮೇಲ್ಮನವಿಯ ಪ್ರತಿಯನ್ನು ಸಮಿತಿಯ ಮುಂದೆ ಮಂಡಿಸಿ ಕಂದಾಯ ಕಡಿಮೆ ಮಾಡಲು ಕೋರಿರುತ್ತಾರೆ.
ಸಂಬಂಧಪಟ್ಟ ಸಹಾಯಕ ಕಂದಾಯ ಅಧಿಕಾರಿಯವರು ಹಾಜರಿದ್ದು ನಿಗಧಿ ಪಡಿಸಿರುವ ಕಂದಾಯವು ಕ್ರಮ ಬದ್ಧವಾಗಿದ್ದು ವಾಣಿಜ್ಯ ಭಾಗಕ್ಕೆ ಶೇಕಡ 20ರಷ್ಟು ಹೆಚ್ಚಿಸಲಾಗಿದೆ ಎಂದು ತಿಳಿಸಿರುತ್ತಾರೆ.

"ಆದೇಶಕ್ಕಾಗಿ ಕಾಯ್ದಿರಿಸಿದೆ"

02.ವಿಷಯ:ಸಂಖ್ಯೆ:ಅಸ್ಥಾಸ/(ಆ)/03/2010-11

ಶ್ರೀ.ಅಬ್ದುಲ್ ಕಾದಿರ್ ಪಿ.ಎಂ. (ಪ್ರತಿನಿಧಿ) ಮೆ:ಹೆಲ್ತ್ ವೇ ಮಡಿಕಲ್ ಡಯಾಗ್ನೋಸ್ಟಿಕ್, ನಂ. 393, 7ನೇ ಅಡ್ಡರಸ್ತೆ, 7ನೇ ಮುಖ್ಯರಸ್ತೆ, 4ನೇ ಬ್ಲಾಕ್, ಕೋರಮಂಗಲ ಬೆಂಗಳೂರ-34 ರವರು ಮೆಡಿಕಲ್ ಡಯಾಗ್ನೋಸ್ಟಿಕ್‌ಗೆ ಪರವಾನಗಿ ನೀಡಲು ಆರೋಗ್ಯ ವೈದ್ಯಾಧಿಕಾರಿ (ಕೋರಮಂಗಲ)ರವರ ನಿರಾಕರಿಸಿದ ಹಿಂಬರಹ ವಿರುದ್ಧ ಸಲ್ಲಿಸಿರುವ ಮೇಲ್ಮನವಿಯ ತೀರ್ಮಾನಕ್ಕಾಗಿ ಮಂಡಿಸಿರುವ ಆಯುಕ್ತರ ಟಿಪ್ಪಣಿ.

ಪ್ರಸ್ತಾವನೆ:-ಅರ್ಜಿದಾರರು ಗೈರು ಹಾಜರಾಗಿರುತ್ತಾರೆ. ಆಕ್ಷೇಪಣೆದಾರರು ಹಾಜರಿದ್ದು ತಮ್ಮ ಹೇಳಿಕೆಯಲ್ಲಿ ಸದರಿ ಪ್ರದೇಶವು ವಸತಿ ಪ್ರದೇಶವಾಗಿದ್ದು, ವಾಣಿಜ್ಯ ಚಟುವಟಿಕೆ ನಡೆಸಲು ಅನುಮತಿ ನೀಡಬಾರದೆಂದು ತಿಳಿಸಿರುತ್ತಾರೆ.

"ಅರ್ಜಿದಾರರಿಗೆ 07-01-2011ಕ್ಕೆ ವಿಚಾರಣೆಗೆ ಹಾಜರಾಗಲು ತಿಳುವಳಿಕೆ
ಪತ್ರ ನೀಡಲು ಆದೇಶಿಸಿ ಮುಂದೂಡಿದೆ"

3.<u>ವಿಷಯ:ಸಂಖ್ಯೆ:ಅಸ್ಥಾಸ/(ಆ)/04/2010-11</u>

ಶ್ರೀ.ಶಾಂತಿಲಾಲ್ ರಿಕಬ್ ಚಾಂದ್, ಕಟ್ಟಡ ಸಂಖ್ಯೆ:487/46, 19ನೇ ಮುಖ್ಯರಸ್ತೆ, 39 ಇ ಅಡ್ಡರಸ್ತೆ, 4ನೇ ಟಿ. ಬ್ಲಾಕ್ ಜಯನಗರ ಇವರಿಗೆ ರೆಸ್ಟೋರೆಂಟ್ ಪರವಾನಗಿ ನೀಡಲು ಆರೋಗ್ಯ ವೈದ್ಯಾಧಿಕಾರಿ (ಜಯನಗರ)ರವರ ನಿರಾಕರಿಸಿದ ಹಿಂಬರಹ ವಿರುದ್ದ ಸಲ್ಲಿಸಿರುವ ಮೇಲ್ಮನವಿಯ ತೀರ್ಮಾನಕ್ಕಾಗಿ ಮಂಡಿಸಿರುವ ಆಯುಕ್ತರ ದಿನಾಂಕ:21-12-2010 ಟಿಪ್ಪಣಿ.

ಪ್ರಸ್ತಾವನೆ:- ಅರ್ಜಿದಾರರ ಪರವಾಗಿ ಅವರ ಅಳಿಯ ಜನಾಬ್ ಕುಮಾರ್ ಹಾಜರಿದ್ದು, ಸದರಿ ಪ್ರದೇಶವು ಈಗ ವಾಣಿಜ್ಯ ಪ್ರದೇಶದಲ್ಲಿ ಬರುವುದಾಗಿ ತಿಳಿಸಿ ಉದ್ದಿಮೆ ಪರವಾನಗಿ ನೀಡುವಂತೆ ಕೋರಿರುತ್ತಾರೆ.

ಆಕ್ಷೇಪಣೆದಾರರ ಈ.ಸ್ಟೆಪನ್, ಎಸ್.ಬಿ.ಬಾಬು, ಶ್ರೀ.ಕೃಷ್ಣಮೂರ್ತಿ ಮತ್ತು ಇತರರು ಹಾಜರಿರಿದ್ದು ಅವರ ಹೇಳಿಕೆಯನ್ನು ಪಡೆಯಲಾಯಿತು. ಎಸ್.ಬಿ.ಬಾಬುರವರು ತಮ್ಮ ಹೇಳಿಕೆಯಲ್ಲಿ ತಾವು ಪಕ್ಕದ ನಿವಾಸಿಯಾಗಿದ್ದು ಸದರಿ ಪ್ರದೇಶವು ಪೂರ್ಣ ವಸತಿ ಪ್ರದೇಶವಾಗಿದ್ದು ರೆಸ್ಟೋರೆಂಟ್ ನಡೆಸಲು ಅನುಮತಿ ನೀಡಬಾರದೆಂದು ತಿಳಿಸಿರುತ್ತಾರೆ. ಕೃಷ್ಣಮೂರ್ತಿಯವರು ತಮ್ಮ ಹೇಳಿಕೆಯಲ್ಲಿ ಸದರಿ ಪ್ರದೇಶವು ಪೂರ್ಣ ವಸತಿ ಪ್ರದೇಶವಾಗಿದ್ದು ರೆಸ್ಟೋರೆಂಟ್ ನಡೆಸಲು ಅನುಮತಿ ನೀಡಿದರೆ ರಸ್ತೆಯು ಕಿರಿದಾಗಿದ್ದು, ವಾಹನಗಳು ಓಡಾಡುದರಿಂದ ಹಾಗೂ ವಾಹನಗಳ ನಿಲುಗಡೆ ಮಾಡುವುದರಿಂದ ಮಾಲಿನ್ಯ ಕಸ ಸಂಗ್ರಹಣೆ, ಬೀದಿ ನಾಯಿಗಳ ಹಾವಳಿ ಉಂಟಾಗುವುದರಿಂದ ಅನುಮತಿ ನೀಡಬಾರದಾಗಿ ತಿಳಿಸಿರುತ್ತಾರೆ.

“ ಸ್ಥಳ ಪರಿಶೀಲನೆಗಾಗಿ ಮುಂದೂಡಿದೆ”

<u>4.ವಿಷಯ ಸಂಖ್ಯೆ:ಅಸ್ಥಾಸ/05/2010-11</u>

ಶ್ರೀ.ಬಿ.ಸಿ.ಕೃಷ್ಣ ಇವರು ದಿನಾಂಕ:29-12-2010ರಂದು ಅಪೀಲು ಸ್ಥಾಯಿ ಸಮಿತಿಗೆ ಮನವಿಯನ್ನು ಸಲ್ಲಿಸಿ ಗಣೇಶ್ ದರ್ಶನ್ ಮೆಯೋಹಾಲ್ ಕ್ಯಾಂಟೀನಿನ ಬಾಗಿಲು ಮುಚ್ಚಿರುವುದನ್ನು ತೆರಿಸಿಕೊಡುವಂತೆ ಕೋರಿರುವ ಬಗ್ಗೆ.

<u>ಪ್ರಸ್ತಾವನೆ:</u>- ಅರ್ಜಿದಾರರು ತಮ್ಮ ಮನವಿಯಲ್ಲಿ ನಾನು ಸುಮಾರು ವರ್ಷಗಳಿಂದ ಕ್ಯಾಂಟೀನನ್ನು ನಡೆಸಿಕೊಂಡು ಬರುತ್ತಿದ್ದು ತಾರೀಖು 08-12-2010ರಂದು ಹಿರಿಯ ಆರೋಗ್ಯ ಪರಿವೀಕ್ಷಕರು ಹಾಗೂ ಆರೋಗ್ಯ ವೈದ್ಯಾಧಿಕಾರಿಗಳು, ಶಾಂತಿನಗರ ವಲಯ ಇವರುಗಳೂ ಬಂದು ಏಕಾ ಏಕಿ ಒಂದು ನೋಟೀಸನ್ನು ನೀಡಿ ಹಲವು ನ್ಯೂನ್ಯತೆಗಳು ಕಂಡು ಬಂದಿರುವುದರಿಂದ ಈಗ ತಾತ್ಕಾಲಿಕವಾಗಿ ಪರವಾನಗಿಯನ್ನು ಅಮಾನತ್ತು ಮಾಡಿರುತ್ತೇವೆ ಎಂದು ತಿಳಿಸಿ ಬಾಗಿಲನ್ನು ಮುಚ್ಚಿಸಿ ಬೀಗವನ್ನು ಹಾಕಿರುತ್ತಾರೆ ಆದರೆ ನಮ್ಮ ಹೋಟೆಲಿನಲ್ಲಿ ಯಾವುದೇ ನ್ಯೂನ್ಯತೆಗಳಿರುವುದಿಲ್ಲ, ಇಲ್ಲಿನ ಮಹಾನಗರ ಪಾಲಿಕೆ ನೌಕರರಿಗೂ ಹಾಗೂ ಸಾರ್ವಜನಿಕರಿಗೂ ರಿಯಾಯಿತಿ ದರದಲ್ಲಿ ರುಚಿಯಾಗಿ ಹಾಗೂ ಶುಚಿಯಾಗಿ ಆಹಾರವನ್ನು ಪೂರೈಸುತ್ತಿದ್ದೇನೆ ಆದ ಕಾರಣ ತಾವುಗಳು ದಯವಿಟ್ಟು ಮುಚ್ಚಿಸಿರುವ ಹೋಟೆಲನ್ನು ತೆರಿಸಿಕೊಡಬೇಕಾಗಿ ವಿನಂತಿಸಿಕೊಂಡಿರುತ್ತಾರೆ.

ಅರ್ಜಿದಾರರ ಮನವಿಯಲ್ಲಿನ ಅಂಶಗಳನ್ನು ಹಾಗೂ ಮನವಿಯೊಂದಿಗೆ ಲಗತ್ತಿಸಿರುವ ಕ್ಯಾಂಟೀನ್ ಪರವಾನಗಿಯನ್ನು ಹಾಗೂ ಪಾಲಿಕೆಯಿಂದ ನೀಡಿರುವ ನೋಟೀನ್ನು ಪರಿಶೀಲಿಸಲಾಯಿತು. ಸದರಿ ಕ್ಯಾಂಟೀನ್ ನಡೆಸಲು ಪರವಾನಗಿಯನ್ನು ದಿನಾಂಕ:31-03-2014ರವರೆಗೂ ನವೀಕರಿಸಿರುವುದು ಕಂಡು ಬರುತ್ತದೆ. ಪಾಲಿಕೆಯಿಂದ ದಿನಾಂಕ:08-12-2010ರಂದು ನೋಟೀಸ್ ಹೊರಡಿಸಿ ಕೆಲವೊಂದು ನ್ಯೂನ್ಯತೆಗಳನ್ನು ಗುರುತಿಸಿ ಅದೇ ದಿನ ಹೋಟೆಲನ ಬಾಗಿಲನ್ನು ಮುಚ್ಚಲಾಗಿದೆಯಲ್ಲದೆ ಸಾರ್ವಜನಿಕರ ಆರೋಗ್ಯಕ್ಕೆ ಹಾನಿ ಉಂಟಾಗುವ ಸಂಭವ ಇದ್ದು ಹಾಗೂ ಸಾಂಕ್ರಾಮಿಕ ರೋಗವು ಹರಡುವ ಸಂಭವ ಇರುವುದರಿಂದ ಎಂದು ನಮೂದಿಸಿರುವುದು ಕಂಡು ಬರುತ್ತದೆ.

ಕ್ಯಾಂಟೀನ್‌ನ ಪರವಾನಗಿಯನ್ನು 2007ರಿಂದ ನವೀಕರಿಸಲಾಗಿರುವುದು ಅರ್ಜಿದಾರರು ನೀಡಿರುವ ಪರವಾನಗಿ ಪ್ರತಿಯಿಂದ ಕಂಡುಬರುತ್ತದೆ. 2007ರಿಂದ ಸದರಿ ಕ್ಯಾಂಟೀನ್‌ನಲ್ಲಿ ಯಾವುದೇ ನ್ಯೂನ್ಯತೆಗಳು ಕಂಡು ಬಂದಿರುವ ಬಗ್ಗೆ ಹಿಂದೆ ನೋಟೀಸ್ ನೀಡಲಾಗಿರುತ್ತದೆಯೇ ಎಷ್ಟು ಬಾರಿ ತಪಾಸಣೆ ಮಾಡಿ ನೋಟೀಸ್ ನೀಡಲಾಗಿದೆಯೆಂಬ ಬಗ್ಗೆ ದಿನಾಂಕ:08-12-2010ರಂದು ನೀಡಿರುವ ನೋಟೀಸ್‌ನಲ್ಲಿ ನಮೂದಿಸಿರುವುದಿಲ್ಲ.

ನೋಟೀಸ್‌ನಲ್ಲಿರುವ ನ್ಯೂನ್ಯತೆಗಳ ಬಗ್ಗೆ ಸ್ಪಷ್ಟವಾಗಿ ವಿವರಿಸಿರುವುದಿಲ್ಲ ಹಾಗೂ ಬಹುಶಃ ರೋಗವು ಹರಡುವ ಸಂಭವವಿರುತ್ತದೆಂದು ತಿಳಿಸಿ ಏಕಾ ಏಕಿ ಬಾಗಿಲನ್ನು ಮುಚ್ಚುವುದರಿಂದ ಅಲ್ಲಿ ಕೆಲಸ ಮಾಡುವ ನೌಕರರ ಜೀವನೋಪಾಯಕ್ಕೂ ತೊಂದರೆಯಾಗಿರುವುದಲ್ಲದೆ ಅರ್ಜಿದಾರರಿಗೆ ಉದ್ಯಮದಲ್ಲಿ ನಷ್ಟವುಂಟಾಗಲು ಕಾರಣವಾಗಿರುತ್ತದೆ. ಹಾಗೂ ಕೆ.ಎಂ.ಸಿ.ಕಾಯ್ದೆ 1976ರ ಯಾವ ಕಲಂ ಅಡಿಯಲ್ಲಿ ಸಾರ್ವಜನಿಕರ ಆರೋಗ್ಯದ ಮೇಲೆ ದುಷ್ಪರಿಣಾಮ ಬೀರುತ್ತದೆಂಬ ಬಗ್ಗೆ ಸ್ಪಷ್ಟ ಕಾರಣಗಳನ್ನು ತಿಳಿಸಿರುವುದು ಕಂಡು ಬರುತ್ತಿಲ್ಲ. ಇದೆಲ್ಲವನ್ನೂ ಗಮನಿಸಲಾಗಿ ಕ್ಯಾಂಟೀನ್ ಮುಚ್ಚವಾಗ ಕಾನೂನಿನಲ್ಲಿರುವ ನಿಯಮಗಳನ್ನು ಪಾಲಿಸದೇ ಇರುವುದು ಕಂಡು ಬರುತ್ತದೆ.

ಅರ್ಜಿದಾರರು ತಮ್ಮ ಮನವಿಯಲ್ಲಿ ತಿಳಿಸಿರುವಂತೆ ನ್ಯೂನ್ಯತೆಗಳ ಬಗ್ಗೆ ನೋಟೀಸ್‌ನ್ನು ನೀಡಿ ನ್ಯೂನ್ಯತೆಗಳನ್ನು ಸರಿಪಡಿಸಲು ಕಾಲವಕಾಶವನ್ನು ನೀಡದೆ ಏಕಾ ಏಕಿ ಬಾಗಿಲು ಮುಚ್ಚಿರುವುದು ಸ್ವಭಾವ ಸಿದ್ಧ ನ್ಯಾಯಕ್ಕನುಗುಣವಾಗಿಲ್ಲದೇ ಇರುವುದು ಸ್ಪಷ್ಟವಾಗಿರುತ್ತದೆ.

**ದಿನಾಂಕ:31-12-2010: ನಿರ್ಣಯ:- ಈ ಮೇಲ್ಕಂಡ ಎಲ್ಲಾ ಅಂಶಗಳನ್ನು ಕೂಲಂಕಷವಾಗಿ ಪರಿಶೀಲಿಸಿ ಕೆ.ಎಂ.ಸಿ. ಕಾಯ್ದೆ 1976ರ ಅನುಸಾರ ಪರವಾನಗಿಯನ್ನು ರದ್ದುಮಾಡಲು ಅರ್ಜಿದಾರರಿಗೆ ನೋಟೀಸ್ ನೀಡಿ ಕಾಲವಕಾಶ ನೀಡದೆ ತಪಾಸಣೆ ಮಾಡಿದ ದಿನವೇ ನೋಟೀಸ್‌ನ್ನು ಹೊರಡಿಸಿ ಬಾಗಿಲನ್ನು ಮುಚ್ಚಿರುವುದು ಕಾನೂನು ಬಾಹಿರವಾಗಿರುವುದು ಕಂಡು ಬರುವುದರಿಂದ ದಿನಾಂಕ:08-12-2010ರಂದು ನೀಡಿರುವ ನೋಟೀಸ್‌ಗೆ ತಡಯಾಜ್ಞೆ ನೀಡುತ್ತಾ ಕ್ಯಾಂಟೀನ್ ಬಾಗಿಲು ಮುಚ್ಚಿರುವುದನ್ನು ಕೂಡಲೇ ತೆರವುಗಳಿಸಲು ಹಾಗೂ ಕ್ಯಾಂಟೀನ್ ಮುಚ್ಚುವ ಮೊದಲು ಕಾಲ ಕಾಲಕ್ಕೆ ತೆಗೆದುಕೊಂಡ ಕ್ರಮಗಳ ಪೂರ್ಣ ವರದಿಯೊಂದಿಗೆ ಸಮಿತಿಯ ತೀರ್ಮಾನಕ್ಕಾಗಿ ಕಡತವನ್ನು ಮಂಡಿಸಲು ಆಯುಕ್ತರು ಕ್ರಮ ಕೈಗೊಳ್ಳುವುದೆಂದು ಸಮಿತಿಯು ತೀರ್ಮಾನಿಸಲಾಯಿತು.**

ಃಸಹಿಃ
ಅಧ್ಯಕ್ಷರು,
ಅಪೀಲುಗಳ ಸ್ಥಾಯಿ ಸಮಿತಿ.

## ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

## ಅಪೀಲು ಸ್ಥಾಯಿ ಸಮಿತಿಯ ದಿನಾಂಕ:07-01-2011ರಂದು ನಡೆದ ಸಭೆಯ ನಡವಳಿಗಳು

| ಕ್ರಮ | ಸದಸ್ಯರು ಹೆಸರು | ಪದನಾಮ | ಹಾಜರಿದ್ದ ಅಧಿಕಾರಿಗಳು |
|---|---|---|---|